ಪ್ರಶ್ನೆ. ೧೦೭೮. (ಮಾನ್ಯ ಸದಸ್ಯರು ಹಾಜರಿಲ್ಲ)
ಪ್ರಶ್ನೆ. ೧೩೬೧. (ಮಾನ್ಯ ಸದಸ್ಯರು ಹಾಜರಿಲ್ಲ)
ಪ್ರಶ್ನೆ. ೧೨೭೦. (ಮಾನ್ಯ ಸದಸ್ಯರು ಹಾಜರಿಲ್ಲ)
ಪ್ರಶ್ನೆ. ೫೭೮. (ಮಾನ್ಯ ಸದಸ್ಯರು ಹಾಜರಿಲ್ಲ)
ಪ್ರಶ್ನೆ. ೧೪೭೫. (ಮಾನ್ಯ ಸದಸ್ಯರು ಹಾಜರಿಲ್ಲ)

೧೯೮೫–೮೬ನೇ ಸಾಲಿನಲ್ಲಿ ರಾಜ್ಯದಲ್ಲಿ ನಡೆದ ಅಪರಾಧಗಳು.

೯೧೮. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫–೮೬ ರ ಸಾಲಿನಲ್ಲಿ ಆಸ್ತಿ ಮತ್ತು ವ್ಯಕ್ತಿಗಳ ವಿರುದ್ಧ ರಾಜ್ಯದಲ್ಲಿ ಆದ ಒಟ್ಟು ಅಪರಾಧಗಳೆಷ್ಟು ?

ಆ) ೧೯೮೫–೮೬ರ ಸಾಲಿನಲ್ಲಿ ಪರಿಶಿಷ್ಟ ಜಾತಿ ಹಾಗೂ ದುರ್ಬಲ ವರ್ಗದವರ ಮೇಲೆ ಕೆಳಕಂಡ ಅಂಶಗಳಲ್ಲಿ ನಡೆದ ದೌರ್ಜನ್ಯಕ್ಕೆ ಸಂಭಂಧಪಟ್ಟ ಅಪರಾಧಗಳೆಷ್ಟು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಈ ಕೆಳಕಂಡಂತೆ ಅಪರಾಧಗಳಾಗಿವೆ.—

೧) ವ್ಯಕ್ತಿಗಳ ವಿರುದ್ಧ	...	೨೪೪
೨) ಆಸ್ತಿಗಳ ವಿರುದ್ಧ	...	೫೦

ಆ) ಈ ಕೆಳಕಂಡಂತೆ ಅಪರಾಧಗಳಾಗಿವೆ.—

	ಪರಿಶಿಷ್ಟ ಜಾತಿ	ದುರ್ಬಲವರ್ಗ
೧) ಗಂಡಸರು	೨೩೩	೧
೨) ಹೆಂಗಸರು	೧೧	
೩) ಅಸ್ಪೃಶ್ಯತೆಯ ಬಗ್ಗೆ	೫೯೪	—

(ನವೆಂಬರ್ ಅಂತ್ಯದವರೆಗೆ)

ಶ್ರೀ ಬಿ. ಬಸವಲಿಂಗಪ್ಪ— ಮಾನ್ಯ ಅಧ್ಯಕ್ಷರೆ, ೮೫–೮೬ರ ಸಾಲಿನಲ್ಲಿ ಆಸ್ತಿ ಮತ್ತು ವ್ಯಕ್ತಿಗಳ ವಿರುದ್ಧ ರಾಜ್ಯದಲ್ಲಿ ಆದ ಒಟ್ಟು ಅಪರಾಧಗಳೆಷ್ಟು? ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ೫೦ ಮತ್ತು ೨೪೪ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ, ಈ ಅಪರಾಧಗಳ ಬ್ರೇಕಪ್‌ನ್ನು ಕೊಟ್ಟಿಲ್ಲ. ಯಾವ ಯಾವ ಅಪರಾಧಗಳ ಕೆಳಗೆ ಈ ಸಂಖ್ಯೆಗಳು ಬರುತ್ತವೆ ಎಂಬುದನ್ನು ತಿಳಿಸಬೇಕು ಮತ್ತು ಪರಿಶಿಷ್ಟ ವರ್ಗಗಳು ಮತ್ತು ದುರ್ಬಲ ವರ್ಗಗಳವರಿಗೆ ಆದಂತಹ ದೌರ್ಜನ್ಯಗಳು ಮತ್ತು ಅಪರಾಧಗಳು ಎಷ್ಟೆಂಬುದನ್ನೂ ಸಹ ಹೇಳಿಲ್ಲ. ಇದರಲ್ಲಿ ಅಲ್ಪಸಂಖ್ಯಾತರ ಬಗ್ಗೆ ವಿವರಗಳೂ ಇಲ್ಲ. ಇವರಿಗಾಗಂತ್ರಿರುವ ಅನಾನುಕೂಲಗಳ ಬಗ್ಗೆ ವಿವರಗಳಿಲ್ಲ. ಮತ್ತು ಇದರಲ್ಲಿ ರೇಪ್‌ಗಳು, ಮಹಿಳೆಯರಿಗೆ ಅವಮಾನಗಳು ಎಷ್ಟು ನಡೆದಿವೆ ಎಂಬುದರ ಬಗ್ಗೆಯೂ ಬ್ರೇಕಪ್ ಕೊಡಬೇಕಾಗುತ್ತದೆ. ಆ ವಿವರಗಳೂ ಇಲ್ಲ. ಶ್ರೀ ಕಣ್ಣನ್‌ರವರು ಕೇಳಿದ ಹಾಗೆ, ಕಾಂಪೆನ್ಸೇಷನ್ ಕೊಡುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯವರಿಗೆ ರೆಫರ್ ಮಾಡಿದರೆ ಅಲ್ಲಿ ಪರಿಹಾರವೇ ಸಿಕ್ಕುವುದಿಲ್ಲ. ಆದ್ದರಿಂದ, ಪ್ರತ್ಯೇಕವಾಗಿ ಯಾವ ಯಾವ ಅಪರಾಧಗಳು ಇವೆ ಎಂಬುದರ ವಿವರ ಕೊಡಬೇಕು. ಬಡವರ ಮೇಲೆ ಹೆಲ್ಲೆ

ಯಾಗುತ್ತಿದೆ. ಆದ್ದರಿಂದ ಸರ್ಕಾರಕ್ಕೆ ಅಂಥವರಿಗೆ ನೇರವಾಗಿ ಸಾಕಷ್ಟು ಕಾಂಪೆನ್ಸೇಷನ್ ಕೊಡಲು ಪ್ರಯತ್ನ ಮಾಡುತ್ತಾರೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು) — ಅಧ್ಯಕ್ಷರೆ. ಬ್ರೇಕಪ್ ಈ ರೀತಿ ಇದೆ. ಒಟ್ಟು ಅಪರಾಧಗಳು ೨೪. ಖುಖೂನಿಗಳು ೨೧. ಇನ್ನಿತರ ಅಪರಾಧ ೭. ಬಗರಿ ಸಂಭೋಗ ೧೧, ಇತರೇ ೨೦೫. ಒಟ್ಟು ೨೪೦. ಅಸ್ತಿ ನಷ್ಟ ಉಂಟಾದ ಪ್ರಕರಣಗಳಲ್ಲಿ ಬೆಂಕಿ ಪ್ರಕರಣಗಳು ೫೦. ಇದರಲ್ಲಿ ಆಸ್ತಿ ವಿರುದ್ಧ ಅಪರಾಧ ೧೫, ಗಂಭೀರ ಕಿಡಿಗೇಡಿತನದ ಪ್ರಕರಣಗಳು ೩೫ ಒಟ್ಟು ೫೦. ನಾನು ಮೊದಲೇ ತಿಳಿಸಿದ ಹಾಗೆ, ಸಮಾಜ ಕಲ್ಯಾಣ ಇಲಾಖೆ ಮುಖಾಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರಿಗೆ ಇಂತಹ ಬೆಂಕಿ ಪ್ರಕರಣಗಳು ಮತ್ತು ಅಪಘಾತಗಳಿಂದ ನೊಂದಂತಹವರಿಗೆ ದೌರ್ಜನ್ಯಗಳಿಗೆ ತಕ್ಕ ಹಾಗೆ ಪರಿಹಾರ ಕೊಡಬೇಕೆಂದು ಈಗಾಗಲೇ ಸರ್ಕಾರದ ಆದೇಶ ಇದೆ. ಇದರ ಪ್ರಕಾರ ಇಂತಹ ಪ್ರಕರಣಗಳಲ್ಲಿ ಎಷ್ಟು ಹಣ ಕೊಡಬೇಕೆಂದು ಈಗಾಗಲೇ ಸಿಬಿಸಿ ಸೆಲ್ ಡಿಐಜಿಯವರು ಸಮಾಜ ಕಲ್ಯಾಣ ಇಲಾಖೆಗೆ ಶಿಫಾರಸ್ಸು ಮಾಡಿದ್ದಾರೆ. ಆದಷ್ಟು ಬೇಗ ಅವರ ನೇರವಾಗಿ ಸಹಾಯ ದೊರಕಲು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ— ಈ ಬಗ್ಗೆ ಸರ್ಕಾರದವರು ಆದೇಶ ಹೊರಡಿಸಿದ್ದಾರೆ ಎಂದು ಹೇಳುತ್ತೀರಿ. ಆದರೆ ಅದರ ನಕಲು ನನ್ನ ಬಳಿ ಇಲ್ಲ. ಸರ್ಕಾರದ ಆದೇಶವಿದ್ದ ಮೇಲೆ, ಇದು ಕ್ರಿಮಿನಲ್‌ಗೆ ಸೇರಿದ ವಿಚಾರ, ಅಲ್ಲಾ ಅಂಡ್ ಆರ್ಡರ್‌ಗೆ ಸಂಬಂಧಪಟ್ಟ ವಿಚಾರ. ಇದರಲ್ಲಿ ಸಮಾಜ ಕಲ್ಯಾಣ ಇಲಾಖೆ ಮಾಡತಕ್ಕದ್ದಾ ಏನು? ಆಫೆನ್ಸ್ ಬಗ್ಗೆ ಮತ್ತು ಲಾ ಆಂಡ್ ಆರ್ಡರ್ ಬಗ್ಗೆ ನಿಮಗೆ ಇರತಕ್ಕ ಜವಾಬ್ದಾರಿ ಏನು? ನೊಂದಂತಹವರಿಗೆ ನೇರವಾಗಿ ಪರಿಹಾರ ನೀಡಲು ಯಾವ ಪ್ರಯತ್ನ ಮಾಡುತ್ತೀರಿ? ಅದನ್ನು ಪರಿಶೀಲನೆ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ರಾಚಯ್ಯ— ಈವರೆಗೂ ಇಂತಹ ಅಪರಾಧಗಳಲ್ಲಿ ನೊಂದವರಿಗೆ ಪರಿಹಾರ ನೀಡುವ ಒಂದು ಪದ್ಧತಿ ನಡೆದುಕೊಂಡು ಬಂದಿಲ್ಲ. ಬೇರೆಯವರಿಂದ ತೊಂದರೆಯಾದ ಕಾಲದಲ್ಲಿ ಬಹುಶಃ ಬಹಳ ಕಡಿಮೆ ಸಂದರ್ಭಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸ್ವಲ್ಪ ಪರಿಹಾರವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ನಿಮ್ಮ ವರ್ಗದವರಿಗೆ ತೊಂದರೆಗಳಾದರೆ ಅನುಕಂಪ ಇರತಕ್ಕಂಥಾದ್ದು ಸಹಜ ಆದ್ದರಿಂದ ಅವರಿಗೆ ಪರಿಹಾರ ಕೊಡಬೇಕೆಂದು ಸರ್ಕಾರದ ಆದೇಶ ವಿದೆ. ಆದೇಶದ ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ— ಈ ಬಗ್ಗೆ ನೇರವಾಗಿ ಉತ್ತರ ನೀಡದೆ. ಪ್ರಶ್ನೆಯನ್ನು ತಿರುಗಿಸಿ. ತಿರುಗಿಸಿ ಉತ್ತರ ಕೊಡುವುದು ಸರಿಯಲ್ಲ. ನಾನು ಹೇಳಿದ್ದು ಪರಿಶಿಷ್ಟ ವರ್ಗದವರಿಗೆ ಅನ್ಯಾಯವಾಗುತ್ತಿದೆ, ದೌರ್ಜನ್ಯವಾಗುತ್ತಿದೆ ಎಂದು. ಇದನ್ನು ತಡೆಗಟ್ಟಬೇಕಾದರೆ ಅವರಿಗೆ ಸರ್ಕಾರದವರು ನೇರವಾಗಿ ಬಂದು ಸಾಕಷ್ಟು ಕಾಂಪೆನ್ಸೇಷನ್ ಕೊಟ್ಟು ಅವರಿಗೆ ಪುನರ್ವಸತಿ ಮಾಡುತ್ತಾರೆ ಎಂದು ಜನಗಳಿಗೆ ಗೊತ್ತಾದರೆ. ಆವರಿಗೆ ಕಿರುಕುಳ ಕಡಿಮೆಯಾಗುತ್ತದೆ. ಮತ್ತು ಇಂತಹ ಅಪರಾಧಗಳು ಕಡಿಮೆಯಾಗುತ್ತವೆ. ಜಾತಿ ಆಧಾರದ ಮೇಲೆ ಮನೆ, ಗುಡಿಸಲುಗಳನ್ನು ಲೂಟಿ ಮಾಡುವ ಪ್ರಕರಣಗಳೂ ನಡೆಯುತ್ತವೆ. ಅವರಿಗೆ ಯಾವುದೇ ರೀತಿಯಲ್ಲಿ ತೊಂದರೆ ಕೊಡಲು ಪುನಸ್ಸಾಧಾರದ ರೀತಿಯಲ್ಲಿ ಸರ್ಕಾರದವರು ನೇರವಾಗಿ ಬಂದು ಸಹಾಯ ಮಾಡುವ ಬಗ್ಗೆ ಯೋಚನೆ ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ— ಮಾನ್ಯ ಅಧ್ಯಕ್ಷರೆ. ಈ ವಿಷಯದಲ್ಲಿ ನಾನು ಸಾಕಷ್ಟು ಯೋಚನೆ ಮಾಡುತ್ತೇನೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅನುಕೂಲ ಮಾಡಿಕೊಡಲು ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ ೪೭೩ (೧೧೧೧)— (ಸದಸ್ಯರು ಗೈರು ಹಾಜರಾಗಿದ್ದರು)

ಪ್ರಶ್ನೆ ಸಂಖ್ಯೆ ೪ (೨೨)— (ಸದಸ್ಯರು ಗೈರು ಹಾಜರಾಗಿದ್ದರು)

ಅಧ್ಯಕ್ಷರು— ಪ್ರಶ್ನೋತ್ತರ ವೇಳೆ ಮುಗಿಯಿತು.